## ರಕ್ತಸಂಬಂಧಿ

ಹೆಂಡತಿ ಸಿಟ್ಟಿನಿಂದ
ಹೇಳಿದಳು,
‘ನಿಮ್ಮನ್ನು
ಮದುವೆಯಾಗುವ ಬದಲು
ಒಬ್ಬ ರಾಕ್ಷಸನನ್ನು
ಮದುವೆಯಾಗಿದ್ದರೂ
ಸುಖವಾಗಿರುತ್ತಿದ್ದೆ...’ ಅಂತ.
ಅದಕ್ಕೆ ಗಂಡ ಹೇಳಿದ,
‘ಹಾಗೆಲ್ಲಾ ರಕ್ತ
ಸಂಬಂಧದಲ್ಲಿ
ಮದುವೆಯಾಗಬಾರದು...’

**ತೈರೊಳ್ಳಿ ಮಂಜುನಾಥ ಉಡುಪ**





## ಹೀಗೂ ಉಂಟು

ಗುಂಡ ಅಪರೂಪಕ್ಕೆ ಪ್ರತಿಷ್ಠಿತ ಮಾಲ್‌ನಲ್ಲಿ ತನ್ನ ಹೆಂಡತಿಯ ಕೈಯನ್ನು ಹಿಡಿದುಕೊಂಡು ಹೋಗುತ್ತಿದ್ದ. ಇದನ್ನು ಕಂಡು ಅವನ ಅನೇಕ ಗೆಳೆಯರು, ‘ಪರವಾಗಿಲ್ವೆ, ಮದುವೆಯಾಗಿ ಇಷ್ಟು ವರ್ಷವಾಗಿದ್ದರೂ ಇನ್ನೂ ಹೊಸ ಪ್ರೇಮಿಗಳಂತೆ ಕೈ ಹಿಡಿದುಕೊಂಡು ಹೋಗುತ್ತಿದ್ದಾರೆ' ಅಂತ ಅಂದುಕೊಂಡರು. ಆತ್ಮೀಯ ಗೆಳೆಯನೊಬ್ಬ ಕೇಳಿಯೇ ಬಿಟ್ಟ–
‘ಏನೋ, ಇನ್ನೂ ರೊಮಾಂಟಿಕ್ ಮೂಡ್‌ನಲ್ಲೇ ಇದ್ದೀಯಾ?’ ಅಂತ. ಅದಕ್ಕೆ ಗುಂಡ ಹೇಳಿದ, ‘ಎಂತಾ ಮಣ್ಣಾಂಗಟ್ಟಿನೂ ಇಲ್ಲಾ... ಕೈ ಬಿಟ್ಟರೆ ಅಂಗಡಿಯೊಳಗೆ ನುಗ್ಗಿ ಬಿಡ್ತಾಳೆ ಅಂತ ಭಯ ಅಷ್ಟೆ.’

**ವಿ. ವಿಜಯೇಂದ್ರ ರಾವ್**